ಸಂಖ್ಯೆ: ಎ7/ಭೂಮಿ/ಕೆಶಿಪ್-3/ಸಿಆರ್.68/2019-20
1337

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಕೋಲಾರ ಅರಣ್ಯ ವಿಭಾಗ
ಕೋಲಾರ. ದಿನಾಂಕ: 23-07-2025

ಇವರಿಗೆ,
ಕಾರ್ಯಪಾಲಕಇಂಜಿನಿಯರ್,
ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ,
ಕೆಶಿಪ್ ವಿಭಾಗ, ನಂ. ಎಫ್ 149, 1ನೇ ಮಹಡಿ,
ಭಾರತ್ ನಗರ್ ಸ್ಟೇಜ್-1, ಈಸ್ಟ ವೆಸ್ಟ ಕಾಲೇಜ್ ರಸ್ತೆ,
ಬಿಇಎಲ್ ಬಡಾವಣೆ, ಮಾಗಡಿ ರಸ್ತೆ, ಬೆಂಗಳೂರು – 560 091

ಮಾನ್ಯರೆ,

ವಿಷಯ: ಕೋಲಾರ ಜಿಲ್ಲೆ, ಶ್ರೀನಿವಾಸಪುರತಾಲ್ಲೂಕು ವ್ಯಾಪ್ತಿಯ ಕೆಶಿಪ್-3 ಪ್ಯಾಕೇಜ್ 1ಬಿ, ಚಿಂತಾಮಣಿ-ಆಂಧ್ರ ಪ್ರದೇಶ ಗಡಿಯವರೆಗೆ 28.12 ಕಿ.ಮೀ ರಸ್ತೆ ಅಭಿವೃದ್ಧಿಗೆ ಅಡ್ಡಿಯಾಗುವ ಮರಗಳ ತೆರವುಗೊಳಿಸಿ ರಸ್ತೆ ಇಕ್ಕೆಲಗಳಲ್ಲಿ ನೆಡುತೋಪು ನಿರ್ಮಿಸಿ ನಿರ್ವಹಣೆ ಮಾಡಲು ತಗಲುವ ವೆಚ್ಚದ ವ್ಯತ್ಯಾಸದ ಮೊತ್ತ ಪಾವತಿಸುವ ಬಗ್ಗೆ.

ಉಲ್ಲೇಖ:
1 ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 168 ಎಫ್‌ಡಿಪಿ 2017 ದಿನಾಂಕ 6-12-2018
2 ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 38 ಎಫ್‌ಡಿಪಿ 2019 ದಿನಾಂಕ 6-1-2023
3 ಕಾರ್ಯಪಾಲಕ ಇಂಜಿನಿಯರ್, ಕೆಶಿಪ್ ವಿಭಾಗ, ತುಮಕೂರು ಇವರ ಪತ್ರದ ಸಂಖ್ಯೆ: ಕಾಇಂ/ಕೆಶಿಪ್-3/ತುಮಕೂರು/2019-20/280 ದಿನಾಂಕ 8-7-2019, 13-1-2020 ಮತ್ತು ಕಾಇಂ/ಕೆಶಿಪ್/ಬೆಂಗಳೂರು/ಪ್ಯಾಕೇಜ್-1ಬಿ/ಅರಣ್ಯ/2020-21/211 ದಿನಾಂಕ 25-09-2020 ಮತ್ತು ಕಾಇಂ/ಕೆಶಿಪ್/ಬೆಂಗಳೂರು/ಅನುದಾನ/2025-26/66 ದಿನಾಂಕ 21-05-2025
4 ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ 07-10-2020 ಮತ್ತು 07-12-2024
5 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: KFD/HOFF/A5-4(GFL)/47/2019-FC ದಿನಾಂಕ -03-2025
6 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: KFD/HOFF/A5-3(GFL)/34/2019-FC ದಿನಾಂಕ 07-07-2025
7 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: KFD/HOFF/A5-4(GFL)/47/2019-FC ದಿನಾಂಕ 21-07-2025

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆಶಿಪ್-3 ಪ್ಯಾಕೇಜ್ 1ಬಿ, ಚಿಂತಾಮಣಿ-ಆಂಧ್ರ ಪ್ರದೇಶ ಗಡಿರಸ್ತೆಯನ್ನು ಏಷಿಯನ್ ಡೆವಲಪ್‌ಮೆಂಟ್ ಆರ್ಥಿಕ ನೆರವಿನೊಂದಿಗೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, ಸದರಿ ರಸ್ತೆ ಕಾಮಗಾರಿಗೆ ಅಡ್ಡಿಯಾಗುವ ರಸ್ತೆಬದಿಯ ಮರಗಳ ಕತ್ತಾವಣೆ ಮಾಡಲು ಉಲ್ಲೇಖ (3) ರ ಪ್ರಸ್ತಾವನೆ ಪರಿಶೀಲಿಸಿ ದಿನಾಂಕ 02-08-2019ರ ಈ ಕಛೇರಿ ಪತ್ರದಲ್ಲಿ ಉಲ್ಲೇಖ (1)ರ ಸರ್ಕಾರದ ಆದೇಶದಂತೆ ಅಭಿವೃದ್ಧಿಪಡಿಸುವ ರಸ್ತೆಯ ಇಕ್ಕೆಲಗಳಲ್ಲಿ ತೆರವುಗೊಳಿಲಾಗುವ ಮರಗಳ ಬದಲಾಗಿ ರಸ್ತೆಬದಿ ನೆಡುತೋಪು ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಉಲ್ಲೇಖ (1)ರ ಸರ್ಕಾರದ ಆದೇಶದಂತೆ ನಿಗಧಿಪಡಿಸಿದ ದರಗಳನ್ವಯ 28.12 ಕಿ.ಮೀ X 300000.00 / ಕಿ.ಮೀ ರಂತೆ ಒಟ್ಟು ರೂ. 84,36,000.00 ಪಾವತಿಸಲು ಬೇಡಿಕೆ ಸಲ್ಲಿಸಲಾಗಿತ್ತು. ಈ ಕುರಿತು ಉಲ್ಲೇಖ (3)ರ ದಿನಾಂಕ 25-09-2020 ರಲ್ಲಿ ಮೇಲ್ಕಂಡ ಮೊತ್ತವನ್ನು ಪಾವತಿಸಿದ ಮೇರೆಗೆ ಸದರಿ ಮರಗಳನ್ನು ತೆರವುಗೊಳಿಸಲು ಉಲ್ಲೇಖ (4)ರ ಈ ಕಛೇರಿ ಪತ್ರದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

Scanned with OKEN Scanner

ಉಲ್ಲೇಖ (7)ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ಇವರು ಪ್ರಸ್ತುತ ಸಿಎ ಮೊತ್ತವನ್ನು ಬಳಕೆದಾರರಿಂದ ಪಾವತಿಸಿಕೊಂಡು, ಪಾವತಿ ವಿವರಗಳನ್ನು, ಸಿಎ ಪ್ರದೇಶದ ಕೆಎಂಎಲ್ ಫೈಲ್‌ಗಳನ್ನು ಮತ್ತು ಸಿಎ ಪ್ರದೇಶದ ಇ-ಗ್ರೀನ್‌ವಾಚ್ ಪೋರ್ಟಲ್‌ನ ವಿವರಗಳನ್ನು ತಮ್ಮ ಕಛೇರಿಗೆ ಕಳುಹಿಸಲು ಸೂಚಿಸಿರುತ್ತಾರೆ.

ಆದುದರಿಂದ ಉಲ್ಲೇಖ (6)ರ ದಿನಾಂಕ 18-03-2025ರಲ್ಲಿ ಕೆಳಕಂಡಂತೆ ಉಪಯೋಗಿ ಸಂಸ್ಥೆ ಯವರು ಪ್ರತಿ ಹೆಕ್ಟೇರ್‌ಗೆ ರೂ. 17,08,000.00ರಂತೆ ಈಗಾಗಲೇ ಮೊತ್ತವನ್ನು ಪಾವತಿಸಿದ್ದು, ಪರಿಷ್ಕೃತ ಸಿಎ ದರಗಳನ್ವಯ ಬಾಕಿ ಮೊತ್ತವನ್ನು ಪಾವತಿಸಲು ಉಪಯೋಗಿ ಸಂಸ್ಥೆಯವರಿಗೆ ಬೇಡಿಕೆ ಸಲ್ಲಿಸಲು ಸೂಚಿಸಿರುತ್ತಾರೆ.

| ಕ್ರ. ಸಂ | ರಸ್ತೆ ವಿವರ | ಒಟ್ಟು ಸಿಎ ಭೂಮಿಯ ಹೆಕ್ಟೇರ್ | ಪರಿಷ್ಕೃತ ದರ ರೂ. 19,30,000 / ಕಿ.ಮೀ ರಂತೆ ಪಾವತಿಸಬೇಕಾದ ಮೊತ್ತ | ರೂ. 17,08,000 / ಕಿ.ಮೀ ರಂತೆ ಈಗಾಗಲೇ ಪಾವತಿಸಿದ ಮೊತ್ತ | ಪ್ರಸ್ತುತ ಪಾವತಿಸಬೇಕಾದ ಬಾಕಿ ಮೊತ್ತ | ಷರಾ |
|---|---|---|---|---|---|---|
| 1 | ಎಸ್‌ಹೆಚ್ 82 ಚಿಂತಾಮಣಿ ಆಂಧ್ರ ಪ್ರದೇಶ ಗಡಿ ರಸ್ತೆ | 14.0567 | ರೂ. 2,71,29,431.00 | ರೂ. 2,40,08,843.00 | ರೂ. 31,20,588.00 | |

ಆದುದರಿಂದ ಕೂಡಲೇ ಮೇಲೆ ವಿವರಿಸಿದ ಅಂಶಗಳಂತೆ, ಕೆಶಿಪ್-3 ಪ್ಯಾಕೇಜ್ 1ಬಿ, ಚಿಂತಾಮಣಿ-ಆಂದ್ರ ಪ್ರದೇಶ ಗಡಿರಸ್ತೆ ಇಕ್ಕೆಲಗಳಲ್ಲಿ ರಸ್ತೆಬದಿ ನೆಡುತೋಪು ನಿರ್ವಹಣೆ ಮಾಡಲು ಅನುವಾಗುವಂತೆ ಬಾಕಿ ವ್ಯತ್ಯಾಸದ ಮೊತ್ತ ರೂ. 31,20,588.00 ಗಳನ್ನು ಪಾವತಿಸಲು ಪರಿವೇಶ್ ಪೋರ್ಟಲ್‌ನಲ್ಲಿ ಈ ಪತ್ರವನ್ನು ಅಪ್‌ಲೋಡ್ ಮಾಡಿ ನೋಡಲ್ ಅಧಿಕಾರಿಗಳು (FCA) ರವರಿಂದ ಅನುಮೋದನೆ ಪಡೆದು ಕಾಂಪಾ ಲೆಕ್ಕಶೀರ್ಷಿಕೆಯಡಿ ರೂ. 31,20,588.00 ಗಳನ್ನು ಪಾವತಿಸಿ, ಪಾವತಿಸಿದ ಚಲನ್ ಪ್ರತಿಯನ್ನು ಈ ಕಛೇರಿಗೆ ಒದಗಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಕೋಲಾರ ವಿಭಾಗ, ಕೋಲಾರ

Scanned with OKEN Scanner